ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Saturday the 24th July, 1982/Shravana 2, 1904 S.E.

The House met in the Assembly Chamber, Vidhana Soudha, at Fifteen Minutes past Nine of the Clock.

[MR. SPEAKER (SRI K.H. RANGANATH) in the Chair]

STARRED QUESTIONS
(to which oral answers were given)

Private layouts adjacent to Madiwal and Suddaguntepalya

336. SRI M. CHANDRASHEKAR (Jayanagar).—Will the Chief Minister be pleased to state.—

(a) whether it has come to the notice of the Government that large number of pucca buildings have come up in some private layouts adjacent to Madiwala and Suddaguntepalya;

(b) as the owners of the sites have built houses leaving sufficient space for the formation of Roads and Drainages will the Government think of regularising these layouts by reconveying the sites to the owners after collecting the required betterment charges?

SRI R. GUNDU RAO (Chief Minister).—

(a) Yes.

(b) The area was inspected by the Chairman, Bangalore Development Authority, along with the local M.L.A., M.L.C., and M.P. on 13th January 1982. It is under consideration to place the matter of regularisation of the layouts before the Bangalore Development Authority for a decision.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ೨ ತಿಂಗಳ ಹಿಂದೆ ಬಡಾವಣೆಗಳಿಗೆ ಸಂಬಂಧಪಟ್ಟಂತೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಇದರ ಬಗ್ಗೆ ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರೆಂದು ತಿಳಿದುಬಂದಿದೆ. ಹಾಗಾದರೆ ಏನು ಕ್ರಮತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ). ಮಾನ್ಯ ಅಧ್ಯಕ್ಷರೆ ತಾ. ೧೩-೩-೧೯೮೨ರಂದು ಮಾನ್ಯ ಸದಸ್ಯರು ಮತ್ತು ಬಿ.ಡಿ.ಎ. ಛೇರ್ಮನ್‌ರವರೂ ಹೋಗಿ ಸ್ಥಳ ಪರಿಶೀಲನೆ ಮಾಡಿಕೊಂಡು ಬಂದಿದ್ದೀರಿ. ಸುದಗುಂಟೆ ಪಾಳ್ಯದಲ್ಲಿ ೧೫೦ ಹಾಗೂ ಮಡಿವಾಳದಲ್ಲಿ ಸುಮಾರು ೨೦೦ ಪಕ್ಕಾ ಬಿಲ್ಡಿಂಗ್‌ಗಳು ಬಂದಿವೆ. ಇದಾದನಂತರ ಅವಗಳನ್ನು ಯಾವೀತಿ ರೆಗ್ಯುಲರೈಸ್ ಮಾಡಬೇಕೆಂಬ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ... ..

ಶ್ರೀ ಎಂ. ಚಂದ್ರಶೇಖರ್.—ಇದನ್ನು ಸರ್ವೆ ಮಾಡಿ ಬೆಟರ್‌ಮೆಂಟ್ ಲೆವಿ ಹಾಕಬೇಕಾದರೆ ಎಷ್ಟು ಹಣ ಖರ್ಚಾಗುತ್ತದೆ ನೀರು ಸರಬರಾಜಿಗಾಗಲಿ, ಒಳಚರಂಡಿ ವ್ಯವಸ್ಥೆಗಾಗಲಿ, ರಸ್ತೆಗೆ ಆಗಲಿ, ಏನಾದರೂ ಒಂದು ಅಂದಾಜನ್ನು ತಯಾರು ಮಾಡಿದ್ದೀರಾ ? ಮಾಡಿದ್ದರೆ ಅದು ಬೋರ್ಡ್‌ನ ಮುಂದೆ ಬರಬೇಕಾಗುತ್ತದೆ, ಮತ್ತು ಅದನ್ನು ಯಾವಾಗ ಇಡುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಧರ್ಮಸಿಂಗ್.—ಆ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಶಾಸಕರಾದ ತಾವು ಹೇಳಿದ ಮೇಲೆ ಸ್ಥಳ ಪರಿಶೀಲನೆ ಮಾಡಿ ಆವರಿಗೆ ಆದಷ್ಟೂ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಉದ್ದೇಶ ಇಟ್ಟುಕೊಂಡು ಬೋರ್ಡ್‌ನ ಮುಂದೆ ಎಸ್ಟಿಮೇಟಿನ್ನು ತರುತ್ತಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಇದೇ ರೀತಿ ಬೆಂಗಳೂರು ನಗರದಲ್ಲಿರತಕ್ಕ ಅನೇಕ ಅನಧಿಕೃತ ಲೇಔಟ್ ಮತ್ತು ಕೊಳಚೆ ಪ್ರದೇಶಗಳು ಹೆಚ್ಚಾಗಿ ಬೆಂಗಳೂರು ಸುಂದರ ನಗರ ಎಂಬ ಹೆಸರನ್ನು ಕಳೆದುಕೊಳ್ಳುತ್ತಿದೆ. ಈ ಎರಡೂ ಸಮಸ್ಯೆಗಳನ್ನು ಪರಿಹಾರ ಮಾಡಬೇಕಾದುದು ನಗರಾಭಿವೃದ್ಧಿ ಮಂಡಲಿಯವರ ಕರ್ತವ್ಯ. ಆದರೆ ಇದರ ಬಗ್ಗೆ ಯೋಚನೆಯನ್ನೇ ಮಾಡದೆ ನಗರಾಭಿವೃದ್ಧಿ ಮಂಡಲಿಯವರು ಹೊಸಹೊಸ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳುತ್ತಿದ್ದಾರೆ. ಇದನ್ನು ಬಿಟ್ಟು ಅನಧಿಕೃತ ಲೇಔಟ್‌ಗಳನ್ನು ರೆಗ್ಯುಲರೈಸ್ ಮಾಡುವುದು ಮತ್ತು ಕೊಳಚೆ ಪ್ರದೇಶಗಳನ್ನು ನಿರ್ಮೂಲಮಾಡುವಂತೆ ಬಿ.ಡಿ.ಎ.ಸವರಿಗೆ ಆದೇಶ ನೀಡುತ್ತೀರಾ?

ಶ್ರೀ ಧರ್ಮಸಿಂಗ್.—ಈ ವಿಚಾರ ಸಾಕಷ್ಟುಸಾರಿ ಈ ಸದನದಲ್ಲಿ ಚರ್ಚೆಯಾಗಿದೆ. ರೆವಿನ್ಯೂ ಜಾಗದಲ್ಲಿ ಎಲ್ಲೆಲ್ಲಿ ಅನಧಿಕೃತ ಲೇಔಟ್‌ಗಳು ಬಂದಿವೆ ಅವಕ್ಕೆಲ್ಲಾ ಸಿದಿಕ್ ಅಮಿನಿಟೀಸ್ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದೇವೆ. ಈಗ ಕಟ್ಟಿರತಕ್ಕ ಕಟ್ಟಡಗಳು ಎಲ್ಲೆಲ್ಲಿ ಇವೆ ಅವುಗಳನ್ನೆಲ್ಲಾ ಒಡೆದು ಹಾಕುವುದಕ್ಕಾಗುವುದಿಲ್ಲ. ಒಂದು ವೇಳೆ ನಾವು ಒಡೆದು ಹಾಕೋಣವೆಂದು ಹೋದರೆ ಅವುಗಳನ್ನು ಒಡೆದುಹಾಕಬಾರದೆಂದು ಒತ್ತಡಗಳು ನಾನಾರೀತಿಯಾಗಿ ಬರುತ್ತವೆ. ಆಗ ನಾವು ಸುಮ್ಮನಾಗ ಬೇಕಾಗುತ್ತದೆ. ಈಗ ಎಲ್ಲೆಲ್ಲಿ ಪಕ್ಕಾ ಬಿಲ್ಡಿಂಗ್ಸ್ ಬಂದಿವೆ ಅವುಗಳ ಬಗ್ಗೆ ಯಾವರೀತಿ ಕ್ರಮ ಕೈಗೊಳ್ಳಬೇಕೆಂದು ಯೋಚನೆ ಮಾಡಿ ಕ್ರಮ ಕೈಗೊಳ್ಳುವಂತೆ ಆದೇಶ ನೀಡಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್. ಅನಧಿಕೃತ ಲೇಔಟ್ಸ್ ಹೇಗೆ ಬರುತ್ತವೆ ಎಂದರೆ ಖಾಲಿ ಜಾಗಗಳು ಎಲ್ಲೆಲ್ಲಿ ಇರುತ್ತವೆ ಅಲ್ಲೆಲ್ಲಾ ರಾತ್ರೋರಾತ್ರಿ ಮನೆಗಳನ್ನು ಕಟ್ಟಿಬಿಡುತ್ತಾರೆ. ಅವರು ತಮ್ಮ ತಮ್ಮ ಮನಸ್ಸಿಗೆ ಬಂದರೀತಿಯಲ್ಲಿ ಕಟ್ಟಿರುತ್ತಾರೆ. ಈ ಕಾರಣದಿಂದಾಗಿ ಅಲ್ಲಿ ರಸ್ತೆಗಳನ್ನು ಹೂಡುವುದಕ್ಕಾಗಲಿ ನೀರಿನ ವ್ಯವಸ್ಥೆ ಮಾಡುವುದಕ್ಕಾಗಲಿ, ಒಳಚರಂಡಿ ವ್ಯವಸ್ಥೆ ಮಾಡುವುದಕ್ಕಾಗಲಿ ಸಾಧ್ಯವಾಗುವುದಿಲ್ಲ. ನಾವು ನಿಮ್ಮ ಅಧಿಕಾರಿಗಳಿಗೆ ಹೇಳಿದರೆ ಅದು ನಮಗೆ ಸಂಬಂಧ ಪಡುವುದಿಲ್ಲ ಅದು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಿದ್ದು ಅಂತ ಹೇಳುತ್ತಾರೆ ರೆವಿನ್ಯೂ ಇಲಾಖೆಯವರಿಗೆ ಹೇಳಿದರೆ ಅದು ನಗರಸಭೆಗೆ ಸಂಬಂಧಪಟ್ಟಿದ್ದು ಅಂತ ಹೇಳುತ್ತಾರೆ. ಒಟ್ಟಿನಲ್ಲಿ ಬಿ.ಡಿ.ಎ.ಸವರಾಗಲಿ, ನಗರ ಸಭೆಯವರಾಗಲಿ, ಅಥವಾ ಸರ್ಕಾರದವರಾಗಲಿ ಅನಧಿಕೃತ ಕಟ್ಟಡಗಳು ಬರುವುದನ್ನು ತಡೆಗಟ್ಟುತ್ತಿಲ್ಲ. ಬೆಂಗಳೂರು ನಗರಸಭೆಯ ವ್ಯಾಪ್ತಿಯಲ್ಲಿ ಬರತಕ್ಕ ಅನಧಿಕೃತ ಕಟ್ಟಡಗಳ ಬಗ್ಗೆ ನಾನು ಹೇಳುತ್ತಿರುವುದು ಆದ್ದರಿಂದ ತಾವು ಈ ಅನಧಿಕೃತ ಲೇಔಟ್ಸ್ ಬಗ್ಗೆ ವ್ಯವಸ್ಥಿತವಾಗಿ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ನಾವು ಈಗಾಗಲೇ ಕ್ರಮ ತೆಗೆದುಕೊಂಡಿರುವುದು ನಮಗೆ ತಿಳಿದಿದೆ ಕಾರ್ಪೋರೇಷನ್ ವ್ಯಾಪ್ತಿಯಲ್ಲಿ ಬರತಕ್ಕದ್ದರ ಬಗ್ಗೆ ನಗರಸಭೆಯ ಕಮಿಷನರ್‌ರವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಸ್ಲಂಸ್ ಬಗ್ಗೆ ಕೂಡ ಸರಿಯಾದ ಒಂದು ಪ್ರಾವಿಷನ್ ಇರಲಿಲ್ಲವಾದ್ದರಿಂದ ಈಗ ಅದಕ್ಕೂ ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ ಇದರಲ್ಲಿ ಇನ್ನೊಂದು ತೊಂದರೆ ಏನೆಂದರೆ, ಸಾರ್ವಜನಿಕರ ಸಹಕಾರ ಇದಕ್ಕೆ ಸರಿಯಾಗಿ ಸಿಕ್ಕುತ್ತಿಲ್ಲ. ನಾನು ಆಗಲೇ ಹೇಳಿದಂತೆ ಅನಧಿಕೃತ ಕಟ್ಟಡಗಳನ್ನು ನಾವು ಒಡೆದುಹಾಕುವುದಕ್ಕೆ ಹೋದರೆ ಸಾರ್ವಜನಿಕರೇ ತಮ್ಮ ಮನವಿಗಳನ್ನು ತೆಗೆದುಕೊಂಡು ಬರುತ್ತಾರೆ. ಇದನ್ನೆಲ್ಲಾ ನೋಡಿ ಎಲ್ಲೆಲ್ಲಿ ಅನಧಿಕೃತ ಕಟ್ಟಡಗಳು ಬರುತ್ತವೆ ಅವನ್ನೆಲ್ಲಾ ರೆಗ್ಯುಲರ್ಸ್ ಮಾಡಬೇಕೆಂದು ಕೂಡ ನಾವು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಅನಧಿಕೃತ ಕಟ್ಟಡಗಳ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಬೆಂಗಳೂರು ಸುಂದರ ನಗರವಾಗಿದ್ದುದು ಇವತ್ತು ಕೊಳಚೆ ಪ್ರದೇಶಗಳ ನಗರವಾಗಿದೆ

ಈ ಹೆಸರನ್ನು ತಪ್ಪಿಸಬೇಕಾದುದು ಬಿ.ಡಿ.ಎ. ನವರ ಮೊದಲನೇ ಕರ್ತವ್ಯ. ಒಟ್ಟಿನಲ್ಲಿ ಬೆಂಗಳೂರು ನಗರಾಭಿವೃದ್ಧಿ ಮಂಡಲಿಯವರು ಮೊದಲು ಕೊಳಚೆ ನಿರ್ಮೂಲನಾಕಾರ್ಯವನ್ನು ಮಾಡಿ ಅನಂತರ ಹೊಸ ಹೊಸ ಬಡಾವಣೆಗಳ ವಿಚಾರವನ್ನು ಕೈಗೆ ತೆಗೆದು ಕೊಳ್ಳಬೇಕೆಂದು ತಾವು ಅವರಿಗೆ ಆದೇಶ ನೀಡುತ್ತೀರಾ ?

ಶ್ರೀ ಧರ್ಮಸಿಂಗ್.—ಈಗ ಏನಾಗಿದೆ ಎಂದರೆ ಸೈಟುಗಳು ಇಲ್ಲದ ಜನರಿಗೆ ಸೈಟುಗಳನ್ನು ಕೊಡುತ್ತಿದ್ದೇವೆ. ಸೈಟುಗಳ ಮಾಡುವ ಸಲುವಾಗಿ ಜಮೀನು ಕೊಂಡಿದ್ದೇವೆ. ಬೆಂಗಳೂರು ಇನ್ನೂ ಕೂಡ ೧೫ ಕಿಲೋಮೀಟರು ಬೆಳೆಯಬಹುದು ಎಂದು ಅಂದಾಜು ಮಾಡಲಾಗಿದೆ. ಆದ್ದರಿಂದ ವಿಲೇಜ್ ಪಂಚಾಯತ್ ಆಕ್ಟ್ ಸೆಕ್ಷನ್ ೫೪ನ್ನು ಆಮೆಂಡ್‌ಮೆಂಟ್ ಮಾಡುವುದಕ್ಕೆಂದೂ ಕೂಡ ಯೋಚನೆ ಮಾಡುತ್ತಿದ್ದೇವೆ. ಈ ಹಳ್ಳಿಗಳಲ್ಲಿ ಬರತಕ್ಕಂಥ ರೆವಿನ್ಯೂ ಸೈಟ್ಸ್ ಪೂರ್ತಿ ಬಿ.ಡಿ.ಎ ಪರ್‌ವ್ಯೂನಲ್ಲಿ ಬರುವುದಕ್ಕೂ ಕೂಡ ಆದೇಶವನ್ನು ಕೊಟ್ಟಿದ್ದೇವೆ. ಬೆಂಗಳೂರು ಎಲ್ಲಿಯವರೆಗೆ ಬೆಳೆಯುತ್ತದೆಯೋ ಅಲ್ಲಿಯವರೆಗೂ ಎಲ್ಲಾ ಸೌಲಬ್ಯಗಳನ್ನು ಕೊಡಲಿಕ್ಕೆ ಆಲೋಚನೆಯನ್ನು ಕೂಡ ಮಾಡತ್ತಿದ್ದೇವೆ. ಅದರ ಪ್ರಕಾರ ರೆವಿನ್ಯೂ ಸೈಟ್ಸ್‌ನಲ್ಲಿ ಬರತಕ್ಕಂತವರಿಗೂ ಕೂಡ ಆಲ್ಟರ್‌ನೇಟೀವ್ ಸೈಟ್ಸ್ ಕೊಡತಕ್ಕಂಥದ್ದಕ್ಕೂ ಅವಕಾಶವಿರುತ್ತದೆ. ಮತ್ತೆ ಅನ್ ಆತರೈಸ್ಡ್ ಅಂದರೆ ಅನಧಿಕೃತರಾಗಿರುವವರನ್ನು ಕೂಡ ರೆಗ್ಯುಲರೈಸ್ ಮಾಡುವುದಕ್ಕೂ ಕೂಡ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಬಡಜನರಿಗೆ ಉಚಿತ ನಿವೇಶನಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ ಈಗ ಒಂದು ಸಾವಿರ ಕೊಡುತ್ತೇವೆ, ಆಮೇಲೆ ಒಂದು ಸಾವಿರ ಕೊಡುತ್ತೇವೆಂದು ಹೇಳಿದ್ದೀರಿ. ಬೆಂಗಳೂರು ನಗರದಲ್ಲಿ ಬರತಕ್ಕಂಥ ಕೊಳಚೆ ಪ್ರದೇಶದಲ್ಲಿರುವವರಿಗೆ ಉಚಿತನಿವೇಶನಗಳನ್ನು ಕೊಡುವಂತೆ ಇತರ ಪ್ರದೇಶಗಳಲ್ಲಿ ಬರತಕ್ಕಂಥ ಬಡಜನತೆಗೆ ಉಚಿತ ನಿವೇಶನಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಹೇಳಿದಂತೆಮಠದಲ್ಲಿಯಲ್ಲಿ ಒಂದು ಸಾವಿರಸೈಟುಗಳನ್ನು ಮಾಡಿ ಕೊಡಬೇಕೆಂದು ಯೋಚನೆ ಮಾಡಿದ್ದೇವೆ.

Marketing facilities for cocoons

627 SRI D.T. MAYANNA (Huliyurdurga).—Will the Minister for Law, Parliamentary Affairs, Veterinary and Animal Husbandry be pleased to state.—

(a) the names of the areas in Karnataka where the Mysore Race (Seed) Cocoons are reared

(b) the names of the villages where there are Regulated Markets buildings for selling the cocoon in these areas

(c) the amount of market cess derived to the Government from each of these markets for the years 1980-81 and 1981-82

(d) the rules to be followed by the Market officers in these Regulated Markets,

(e) whether Government will take suitable action against these officers if they fail to follow the Regulated Market Rules scrupulously